3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. **2458 /2021**

ದಿನಾಂಕಃ **20.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಮುಬಾರಕ್ | ಚಾಸಾ-10, ಪ್ರಾಸ.-9 |
| ತಂದೆಯ ಹೆಸರುಃ | ನಜೀರ್ ಅಹಮ್ಮದ್ | |
| ವಯಸ್ಸು ಃ | 35 ವರ್ಷ | |
| ಉದ್ಯೋಗ ಃ | ವ್ಯಾಪಾರ | |
| ವಾಸ ಃ | ಬೀರೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ನನಗೆ ಗೊತ್ತು. ಚಾಸಾ-1 ಮತ್ತು ಆರೋಪಿತರಿಗೆ 2021 ರಲ್ಲಿ ಆಸ್ತಿ ವಿಚಾರವಾಗಿ ಗಲಾಟೆಯಾಗಿದ್ದು ಗಲಾಟೆ ಸಮಯದಲ್ಲಿ ನಾನು ಹಾಜರಿರಲಿಲ್ಲ. ಚಾಸಾ-1 ರವರಿಗೆ ಕನ್ನಡ ಬಾರದ ಕಾರಣ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಅವರು ಹಿಂದಿ ಭಾಷೆಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಕನ್ನಡದಲ್ಲಿ ಬರೆದುಕೊಟ್ಟಿರುತ್ತೇನೆ. ಸಾಕ್ಷಿ ನಿಪಿ-9 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು. ನಿಪಿ-9 ರಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುತ್ತದೆ.

ಪಾಟೀಸವಾಲುಃ ಶ್ರೀ ಹೆಚ್ ಎನ್ ಎಸ್ ಆರೋಪಿ ಪರ ವಕೀಲರಿಂದಃ

ನಾನು ಒಂದೇ ದೂರನ್ನು ಬರೆದುಕೊಟ್ಟಿರುತ್ತೇನೆ. ಈ ದೂರಿನ ನಂತರ ಆದ ದೂರಿಗೆ ನಾನೇ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಚಾಸಾ-1 ರವರ ಮುಖ ಪರಿಚಯ ಮಾತ್ರ ಇರುತ್ತದೆ. ನಾನು ಎಂ ಎ, ಬಿ ಎಡ್ ಪದವಿ ಪಡೆದಿರುತ್ತೇನೆ. ನನಗೆ ಹರಿಯಾಣ ಭಾಷೆ ಬರುವುದಿಲ್ಲ ಎಂದರೆ ಸರಿ. ನಿಪಿ-9 ರಂತೆ ನಾನೇ ದೂರನ್ನು ಸೃಷ್ಟಿಸಿ ಚಾಸಾ-1 ರವರ ಮೂಲಕ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದರೂ ಚಾಸಾ-1 ರವರ ಮಾತು ಕೇಳಿ ಸುಳ್ಳು ದೂರು ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಗಲಾಟೆಯನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.